

# ಒಂದು ಬಕೆಟ್ಟಿನಲ್ಲಿ ಸಮುದ್ರ

...ಒಂದು ಆವೇಹಿ-ಅಬಾಕಸ್ ಕಥೆ

ಕನ್ನಡಕ್ಕೆ: ಕಿರಣ್ ಭಟ್

Bahuroopi ಬಹುರೂಪಿ

eklavya



## ಆವೇಹಿ ಅಬಾಕಸ್ ಪ್ರಾಜೆಕ್ಟ್

'ಆವೇಹಿ ಅಬಾಕಸ್ ಪ್ರಾಜೆಕ್ಟ್' ಶಾಲಾ ಶಿಕ್ಷಣವನ್ನು ಹೆಚ್ಚು ಪ್ರಸ್ತುತ ಮತ್ತು ಆಕರ್ಷಕವಾಗಿಸಲು ಮಕ್ಕಳು ಮತ್ತು ಶಿಕ್ಷಕರ ಜೊತೆ ಕೆಲಸ ಮಾಡುತ್ತದೆ. '*ಸಂಗತಿ*' ಯೋಜನೆಯಲ್ಲಿ ಅಭಿವೃದ್ಧಿಪಡಿಸಿದ ಕಲಿ–ಕಲಿಸುವ ಸಾಧನಗಳು ಪ್ರಸ್ತುತ ಮುಂಬೈನ ಒಂಬೈನೂರಕ್ಕೂ ಹೆಚ್ಚು ಮುನಿಸಿಪಲ್ ಶಾಲೆಗಳಲ್ಲಿ ಉಪಯೋಗಿಸಲ್ಪಡುತ್ತಿವೆ. ಆವೇಹಿ ಅಬಾಕಸ್ ಪ್ರಾಜೆಕ್ಟ್ ಶಿಕ್ಷಕರ ಕಲಿಕೆಗಾಗಿ '*ಮಂಥನ್*' ಎನ್ನುವ ಪೂರಕ ಪಠ್ಯಕ್ರಮವನ್ನೂ ಸಿದ್ದಪಡಿಸಿದೆ. ಈ ಸಂಸ್ಥೆಯು ದೇಶಾದ್ಯಂತ ನಡೆಯುತ್ತಿರುವ ನ್ಯಾಯಸಮ್ಮತವಾದ ಮತ್ತು ಸಮಸಮಾಜಕ್ಕಾಗಿ ಶಿಕ್ಷಣದ ಹಕ್ಕುಗಳನ್ನು ಪುನರ್ ವ್ಯಾಖ್ಯಾನಿಸುವ ಚಳವಳಿಯ ಭಾಗವಾಗಿದೆ.

## ಬಹುರೂಪಿ

ಪುಸ್ತಕದ ಮೋಹಕ್ಕೆ ಬಿದ್ದ ತುಡುಗು ದಂಡು ರೂಪಿಸಿದ ಸಂಸ್ಥೆ– ಬಹುರೂಪಿ. ಇದು ಕೇವಲ ಪ್ರಕಾಶನ ಸಂಸ್ಥೆಯಲ್ಲ. ಪ್ರಕಾಶನ ರಂಗಕ್ಕೆ ವ್ಯಾಕರಣ ರೂಪಿಸಬೇಕು ಎನ್ನುವ ಕನಸು ಹೊತ್ತ ಸಂಸ್ಥೆ. ಪುಸ್ತಕ ಕೈಗೆತ್ತಿಕೊಂಡಾಗ ಲೇಖಕರ ಜೊತೆ ಜೊತೆಗೆ ಅದನ್ನು ವಿನ್ಯಾಸ ಮಾಡಿದ, ಸಂಪಾದಿಸಿದ, ಅಕ್ಷರ ತಿದ್ದಿದ, ಮುದ್ರಿಸಿದ, ಅದಕ್ಕೆ ಕಲೆಯ ಹೊಳಪು ನೀಡಿದ, ಪ್ಯಾಕ್ ಮಾಡಿದ, ಮಾರಾಟ ಮಾಡಿದ ಎಲ್ಲರ ಪರಿಚಯವಾಗಿಬಿಡಬೇಕು ಎನ್ನುವ ಹಂಬಲ ಹೊತ್ತ ಸಂಸ್ಥೆ.

ಇದಕ್ಕೆ ಬೆನ್ನು ಚಪ್ಪರಿಸುವಂತೆ ಅನೇಕ ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿಗಳು ಸಿಕ್ಕಿವೆ. ಲೇಖಕರು, ಅಕಾಡೆಮಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಮುದ್ರಕರು, ಪ್ರಾಧಿಕಾರದ ಪ್ರಶಸ್ತಿ ಪಡೆದು ಕಣ್ಣಲ್ಲಿ ಮಿಂಚು ತಂದುಕೊಂಡಿದ್ದಾರೆ. ಕಲಾವಿದರು, ಪುಟ ವಿನ್ಯಾಸಕಾರರು ರಾಷ್ಟ್ರಮಟ್ಟದ ಮನ್ನಣೆ ಪಡೆದಿದ್ದಾರೆ. ಒಟ್ಟಿನಲ್ಲಿ 'ಬಹುರೂಪಿ'ಯು ಪ್ರಕಾಶನ ರಂಗದ ಹೊಸ್ತಿಲಲ್ಲಿರುವ ಚಂದದ ರಂಗೋಲಿ.

## ಏಕಲವ್ಯ ಫೌಂಡೇಶನ್

1982ರಿಂದ ಶಿಕ್ಷಣ ಮತ್ತು ಜನ ವಿಜ್ಞಾನದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ 'ಏಕಲವ್ಯ' ಒಂದು ನೊಂದಾಯಿತ ಸರ್ಕಾರೇತರ ಸಂಸ್ಥೆ. ಆಟ, ಚಟುವಟಿಕೆಗಳು ಮತ್ತು ಸೃಜನಾತ್ಮಕ ಕಲಿಕೆಯ ಮೂಲಕ ಮಗುವಿನ ಪರಿಸರಕ್ಕೆ ಸಂಬಂಧಿಸಿದ ವಿಧಾನಗಳನ್ನು ಮತ್ತು ಸಾಧನಗಳನ್ನು ರೂಪಿಸುವುದು ಇದರ ಮುಖ್ಯ ಉದ್ದೇಶ.

ಶಿಕ್ಷಣ, ಜನಪ್ರಿಯ ವಿಜ್ಞಾನ, ಶಿಕ್ಷಣ ಸಂಪುಟಗಳು, ಚಟುವಟಿಕೆಯ ಪುಸ್ತಕಗಳು, ಮಕ್ಕಳ ಸಾಹಿತ್ಯ ಮತ್ತು ಸರ್ವತೋಮುಖ ಅಭಿವೃದ್ಧಿಯ ಬಗೆಗಿನ ಪುಸ್ತಕ ಪ್ರಕಾಶನಕ್ಕೂ '*ಏಕಲವ್ಯ*' ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. *ಚಕ್‌ಮಕ್*, *ಸಂದರ್ಭ್* ಮತ್ತು *ಸ್ರೋತ್* ಎಂಬ ನಿಯತಕಾಲಿಕಗಳನ್ನೂ ಪ್ರಕಟಿಸುತ್ತದೆ.



# ಒಂದು ಬಕೆಟ್ಟಿನಲ್ಲಿ ಸಮುದ್ರ

ಒಂದು ಆವೇಹಿ-ಅಬಾಕಸ್ ಕಥೆ

ಸಚಿತ್ರ ಕಥನ: ದೀಪಾ ಬಲ್ಸಾವರ್
ವಿನ್ಯಾಸ: ಪ್ರೀತಿ ರಾಜವಾಡೆ
ಕನ್ನಡಕ್ಕೆ: ಕಿರಣ್ ಭಟ್

Bahuroopi ಬಹುರೂಪಿ
eklavya

120

# Ondu Buckettinalli Samudra

An Avehi-Abacus story
Illustrations: **Deepa Balsavar**
Design: **Priti Rajwade**
Kannada Translation: **Kiran Bhat**

Original English Text and Illustrations © Avehi-Abacus, Mumbai, www.avehi-abacus.org, May 2013
Kannada Publishing © Bahuroopi and Eklavya

First Edition: May 2025 / 2000 Copies
Paper: 100 gsm Maplitho (Inside) and 300 gsm FB Board (Cover)
ISBN: 978-81-984197-3-6
Pages: 16+8 | Price: ₹100.00

Printed In India

parag
AN INITIATIVE OF TATA TRUSTS

This translation emerged through the Bimba Pratibimba Translation Workshop 2024 anchored by the Parag Initiative of Tata Trusts conducted in collaboration with Bahuroopi.

The development of the original and its translation is supported by the Parag Initiative of Tata Trusts.

Co-published By

**BAHUROOPI Fire Flies**
R P Regency, F-1, 2nd Floor, 2nd Cross,
P&T Colony, R T Nagar, Bangalore - 560 032
editor@bahuroopi.in
Mobile | WhatsApp Bookstore: **70191 82729**
online book store: **bahuroopi.in**

**EKLAVYA FOUNDATION**
Jamnalal Bajaj Parisar
Jatkhedi, Bhopal - 462 026 (MP)
Phone: **+91 755 297 7770-71-72**
www.eklavya.in / books@eklavya.in

---

**ದೀಪಾ ಬಲ್ಸಾವರ್** ಒಬ್ಬ ಬರಹಗಾರ್ತಿ ಮತ್ತು ಸಚಿತ್ರ ಕಥನಕಾರರು. ಕಳೆದ ಇಪ್ಪತ್ತೈದು ವರ್ಷಗಳಿಂದ ಅವರು ಸಾಕಷ್ಟು ಶೈಕ್ಷಣಿಕ ಯೋಜನೆಗಳಲ್ಲಿ ಕೆಲಸ ಮಾಡಿದ್ದಾರೆ.

**ಪ್ರೀತಿ ರಾಜವಾಡೆ** ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ಗ್ರಾಫಿಕ್ ವಿನ್ಯಾಸಕಿ. ಹೆಣ್ಣುಮಗುವಿನ ತಾಯಿಯಾಗಿರುವ ಅವರು, ಮಕ್ಕಳ ಶೈಕ್ಷಣಿಕ ಪುಸ್ತಕಗಳನ್ನು ವಿನ್ಯಾಸಗೊಳಿಸುವಲ್ಲಿ ತಮ್ಮನ್ನು ಹೆಚ್ಚೆಚ್ಚು ತೊಡಗಿಸಿಕೊಂಡಿದ್ದಾರೆ.

**ಕಿರಣ್ ಭಟ್** ಅವರು ಖ್ಯಾತ ರಂಗಕರ್ಮಿಗಳು. ಮಕ್ಕಳ ರಂಗಭೂಮಿಯಲ್ಲಿ ವಿಶೇಷ ಹೆಸರು. ‘ರಂಗ ಕೈರಳಿ’ ‘ಹೌಸ್‌ಫುಲ್’ ಇವರ ಹೆಸರಾಂತ ರಂಗ ಕೃತಿಗಳು. ವಿಶ್ರಾಂತ ಬಿಎಸ್‌ಎನ್‌ಎಲ್ ಅಧಿಕಾರಿ.




ಇವನು ಸೋನು.

ಇದು ಸೋನುವಿನ ಬಕೆಟ್ಟು.



**ಇದು ನಲ್ಲಿ**

ಇದು ತರುವ ನೀರು
ಸೋನುವಿನ ಬಕೆಟ್
ತುಂಬಿಸುವುದು.



## ಇವು ಕೊಳವೆಗಳು

ಇವುಗಳಲ್ಲಿ ನೀರು ಹಾದು ಬಂದು ನಲ್ಲಿಯಲ್ಲಿ ತೊಟ್ಟಿಕ್ಕಿ ಸೋನುವಿನ ಬಕೆಟ್ ತುಂಬಿಸುವುದು.



**ಇದು ಕೆರೆ**

ಇದು ಹಿಡಿದಿಟ್ಟ ನೀರು
ಕೊಳವೆಗಳಲ್ಲಿ ಹಾದು
ನಲ್ಲಿಯಲ್ಲಿ ತೊಟ್ಟಿಕ್ಕಿ
ಸೋನುವಿನ ಬಕೆಟ್ ತುಂಬಿಸುವುದು.



**ಇದು ನದಿ**

ಈ ನದಿ
ನೀರನ್ನು ಹಿಡಿದಿಡುವ ಕೆರೆಗೆ ಹರಿದು
ಕೊಳವೆಗಳಲ್ಲಿ ಹಾದು
ನಲ್ಲಿಯಲ್ಲಿ ತೊಟ್ಟಿಕ್ಕಿ
ಸೋನುವಿನ ಬಕೆಟ್ ತುಂಬಿಸುವುದು.



**ಇದು ಬೆಟ್ಟ**

ಈ ಬೆಟ್ಟದಲ್ಲಿ ನದಿ ಹುಟ್ಟಿ
ನೀರನ್ನು ಹಿಡಿದಿಡುವ ಕೆರೆಗೆ ಹರಿದು
ಕೊಳವೆಗಳಲ್ಲಿ ಹಾದು
ನಲ್ಲಿಯಲ್ಲಿ ತೊಟ್ಟಿಕ್ಕಿ
ಸೋನುವಿನ ಬಕೆಟ್ ತುಂಬಿಸುವುದು.

## ಇವು ಮೋಡಗಳು

ಈ ಮೋಡಗಳು ಬೆಟ್ಟದ
ತುದಿಯಲ್ಲಿ ಮಳೆಯಾಗಿ ಸುರಿದು
ಅಲ್ಲೊಂದು ನದಿ ಹುಟ್ಟಿ
ನೀರನ್ನು ಹಿಡಿದಿಡುವ ಕೆರೆಗೆ ಹರಿದು
ಕೊಳವೆಗಳಲ್ಲಿ ಹಾದು
ನಲ್ಲಿಯಲ್ಲಿ ತೊಟ್ಟಿಕ್ಕಿ
ಸೋನುವಿನ ಬಕೆಟ್ ತುಂಬಿಸುವುದು.







## ಇವನು ಸೂರ್ಯ

ಈ ಸೂರ್ಯ
ನೀರನ್ನು ಕಾಯಿಸಿ, ಮೋಡವಾಗಿಸಿ,
ಮೋಡಗಳು ಬೆಟ್ಟದ ತುದಿಯಲ್ಲಿ
ಮಳೆಯಾಗಿ ಸುರಿದು
ಅಲ್ಲೊಂದು ನದಿ ಹುಟ್ಟಿ
ನೀರನ್ನು ಹಿಡಿದಿಡುವ ಕೆರೆಗೆ ಹರಿದು
ಕೊಳವೆಗಳಲ್ಲಿ ಹಾದು
ನಲ್ಲಿಯಲ್ಲಿ ತೊಟ್ಟಿಕ್ಕಿ
ಸೋನುವಿನ ಬಕೆಟ್ ತುಂಬಿಸುವುದು.





**ಇದು ಸಮುದ್ರ**

ಈ ಸಮುದ್ರ
ಆಳ ನೀಲಿ ಸಮುದ್ರ
ಸೂರ್ಯನಿಂದ ಕಾದು ಮೋಡವಾಗಿ
ಮೋಡಗಳು ಬೆಟ್ಟದ ತುದಿಯಲ್ಲಿ
ಮಳೆಯಾಗಿ ಸುರಿದು
ಅಲ್ಲೊಂದು ನದಿ ಹುಟ್ಟಿ
ನೀರನ್ನು ಹಿಡಿದಿಡುವ ಕೆರೆಗೆ ಹರಿದು
ಕೊಳವೆಗಳಲ್ಲಿ ಹಾದು
ನಲ್ಲಿಯಲ್ಲಿ ತೊಟ್ಟಿಕ್ಕಿ
ಸೋನುವಿನ ಬಕೆಟ್ ತುಂಬಿಸುವುದು.



## ನಂತರ ಮುಂದೇನಾಗುತ್ತದೆ?





ಸೋನುವಿನ ಸ್ನಾನವಾದ ಮೇಲೆ
ನೀರು
ಭೂಮಿಯಲ್ಲಿ ಇಂಗುತ್ತದೆ



ಸಮುದ್ರವನ್ನು ಸೇರುತ್ತದೆ
ಸೂರ್ಯನಿಂದ ಕಾಯಿಸಲ್ಪಟ್ಟು
ಮೋಡವಾಗುತ್ತದೆ

ಬೆಟ್ಟದ ಮೇಲೆ ಮಳೆಯಾಗುತ್ತದೆ
ನದಿಯಾಗಿ ಹರಿಯುತ್ತದೆ
ಕೆರೆಯಲ್ಲಿ ಶೇಖರವಾಗುತ್ತದೆ

ಕೊಳವೆಗಳಲ್ಲಿ ಹಾದು
ನಲ್ಲಿಯ ಮೂಲಕ
ಇನ್ನೊಂದು ಬಕೆಟ್ಟಿಗೆ ಹರಿಯುತ್ತದೆ.



**ಸೋನು ಅವನ ಬಕೆಟ್ಟಿನಲ್ಲಿ ನೀರು ತುಂಬಿಸಲು ಹೊರಡುತ್ತಾನೆ. ಆದರೆ ನಲ್ಲಿಯೆಡೆಗಿನ ಒಂದು ಪ್ರಯಾಣ ಅವನನ್ನು ಕೆರೆಯ ಸುತ್ತ, ನದಿಯ ಗುಂಟ, ಬೆಟ್ಟದ ಮೇಲೆ ಮತ್ತು ಸಮುದ್ರದಾಳಕ್ಕೆ... ಹೀಗೆ ಒಂದು ಸಾಹಸಯಾತ್ರೆಗೆ ಒಯ್ಯುತ್ತದೆ.**

ಈ ಸಚಿತ್ರ ಕಥನ ಕೊನೆಯಲ್ಲಿ ಅಚ್ಚರಿಯನ್ನೂ ಸಂತೋಷವನ್ನೂ ನೀಡುತ್ತದೆ. ಜೊತೆಗೆ ಇವು ಹೇಗೆ ಒಂದಕ್ಕೊಂದು ಸೂಕ್ಷ್ಮವಾದ ಸಂಬಂಧ ಹೊಂದಿವೆ ಎನ್ನುವುದನ್ನೂ ತೋರಿಸುತ್ತದೆ. ಶಾಲೆ ಮತ್ತು ಶಾಲೆಯಾಚೆಯ ಕಿರಿಯರಿಗೂ, ಪ್ರಬುದ್ಧರಿಗೂ ಜಲಚಕ್ರವನ್ನು ವರ್ಣರಂಜಿತವಾಗಿ ಪರಿಚಯಿಸುತ್ತದೆ.



Bahuroopi ಬಹುರೂಪಿ

eklavya

parag
AN INITIATIVE OF TATA TRUSTS

9 788198 419736

Price: ₹ 100.00